ನಿವೇದನೆ

# ಬಾಳುವಂಥ ಹೂವಿಗೇಕೆ ಬಾಡುವಾಸೆ?

**ಹದಿಹರೆಯದ ಮಕ್ಕಳು ತಮ್ಮ ಜೀವ ತ್ಯಜಿಸುವ ನಿರ್ಧಾರ ಕೈಗೊಳ್ಳುವುದನ್ನು ನೋಡಿದಾಗ ಅನೇಕ ಪ್ರಶ್ನೆಗಳು ಏಳುತ್ತವೆ. ಕನಸು ಕಾಣಬೇಕಿರುವ ಕಂಗಳಲ್ಲಿ ಅದೆಂಥ ಒತ್ತಡ ಅವರನ್ನು ಚಿರನಿದ್ರೆಗೆ ದೂಡುತ್ತಿದೆ? ಇಂತಹ ಸಂದರ್ಭದಲ್ಲಿ ನಮ್ಮ ಶಿಕ್ಷಣ ಪದ್ಧತಿ ಬದುಕಿನ ಪ್ರೀತಿ ಕಲಿಸುವಲ್ಲಿ ವಿಫಲ ಆಗಿದೆಯೇ? ಎನ್ನುವ ಅನುಮಾನವು ಹುಟ್ಟುತ್ತದೆ.**



ವಿಜಯ

ಇನ್ನತ್ತು ನಿಮಿಷ, ಇನ್ನೊಂದೇ ಒಂದು ನಿಮಿಷ ಅಂತೆಲ್ಲ ಚೌಕಾಶಿ ಮಾಡಿ, ಅಮ್ಮನ ತಬ್ಬುವ ಕೈಗಳು ಅದ್ಹೇಗೆ ಕುಣಿಕೆ ಹಾಕಲು ಸಜ್ಜಾಗುತ್ತವೆ? ಹೆಗಲ ಮೇಲೆ ಕತ್ತು ಒರಗಿಸಿ, ಕಣ್ತೇಲಿಸುವ ಎಳೆಯ ಮಕ್ಕಳು ಅದ್ಹೇಗೆ ಆ ಕುಣಿಕೆಗೆ ಕೊರಳೊಡ್ಡುತ್ತಾರೆ? ಇದೀಗ ಹದಿಹರೆಯದ ಮಕ್ಕಳು ತಮ್ಮ ಜೀವ ತ್ಯಜಿಸುವ ನಿರ್ಧಾರ ಕೈಗೊಳ್ಳುತ್ತಿರುವಾಗ ಏಳುತ್ತಿರುವ ಪ್ರಶ್ನೆಗಳಿವು. ಕನಸು ಕಾಣಬೇಕಿರುವ ಕಂಗಳಲ್ಲಿ ಅದೆಂಥ ಒತ್ತಡ ಚಿರನಿದ್ರೆಗೆ ದೂಡುತ್ತಿದೆ? ನಮ್ಮ ಶಿಕ್ಷಣ ಪದ್ಧತಿಯಲ್ಲಿ ಒಂದು ಅವಮಾನ, ಒಂದು ಬೈಗುಳ ಅಥವಾ ಒಂದು ಹೀಗಳೆಯುವಿಕೆಯನ್ನು ಸಹಿಸುವ ಶಕ್ತಿ ನೀಡುತ್ತಿಲ್ಲವೆ? ಮಕ್ಕಳನ್ನು ನಾವು ಬದುಕನ್ನು ಸ್ವೀಕರಿಸುವುದನ್ನು ಕಲಿಸದಿದ್ದಲ್ಲಿ ಬರೀ ಸಾಕ್ಷರರಾಗಿಸುತ್ತಿದ್ದೇವೆ. ಶಿಕ್ಷಿತರಾಗಿಸುತ್ತಿಲ್ಲ.

ನೀಡುತ್ತಿರುವ ಶಿಕ್ಷೆ, ಮನದೊಳಗೆ ಪಶ್ಚಾತ್ತಾಪದೊಂದಿಗೆ ಒಳಿತನ್ನು ಮಾಡಿ ತೋರಿಸುವ ಛಲ ಮೂಡಿಸದೆ, ಸಾವಿನಲ್ಲಿ ಪರಿಹಾರ ತೋರುವ ಹತಾಶ ಭಾವ ಮೂಡಿಸುತ್ತಿದೆ. ನಾವು ತಪ್ಪುತ್ತಿರುವುದು ನಮ್ಮ ಪಾಲನೆ ಮತ್ತು ಪೋಷಣೆಯಲ್ಲಿ. ಜೀವ ತೊರೆದು ಸಮಾಧಾನ ನೀಡಬಹುದು ಎಂದು ತೀರ್ಮಾನಿಸುವ ಮಕ್ಕಳ ಮನಸಿನ ತುಮುಲ ಅರ್ಥ ಮಾಡಿಕೊಳ್ಳುವಲ್ಲಿ ಪಾಲಕರು, ಶಿಕ್ಷಕರು ಎಡವುತ್ತಿದ್ದಾರೆ. ವಿಭಕ್ತ ಮತ್ತು ವಿಘಟಿತ ಕುಟುಂಬದ ಮಕ್ಕಳಿಗೆ ಬೇಕಿರುವ ಪ್ರೀತಿ ಮತ್ತು ಭಾವನಾತ್ಮಕ ಬೆಂಬಲ ಸಾಕಷ್ಟು ಪ್ರಮಾಣದಲ್ಲಿ ಸಿಗದಿರುವುದೂ ಕಾರಣವಾಗಿದೆ ಎನ್ನುತ್ತಾರೆ ಮನಃಶಾಸ್ತ್ರಜ್ಞರು. ಶಾಲೆಗಳಲ್ಲಿ ಆಪ್ತಸಮಾಲೋಚಕರು ಇರಬೇಕು, ಶಿಕ್ಷಕರಿಗೂ ಆಪ್ತಸಮಾಲೋಚನೆಯ ತರಬೇತಿ ನೀಡಬೇಕು ಎಂದು ಸುಪ್ರೀಂ ಕೋರ್ಟ್ ನಿರ್ದೇಶಿಸಿದೆ. ಇವೆಲ್ಲವೂ ಸಮಸ್ಯೆಗಳಿಗೆ ಪರಿಹಾರ ಸೂಚಿಸುತ್ತವೆ. ಸಮಸ್ಯೆಯ ನಿರ್ಮೂಲನೆ ಆಗುತ್ತಿಲ್ಲ.

ಸಾವಿನ ಯೋಚನೆ, ಸ್ವರ್ಗದ ಪರಿಕಲ್ಪನೆ ನೀಡುತ್ತಿರುವ ನಮ್ಮ ಸಾಮಾಜಿಕ ವ್ಯವಸ್ಥೆ ಮಕ್ಕಳನ್ನು ಜೀವನ್ಮುಖಿಯಾಗಿಸುವ ಬದಲು ಸಾವಿನತ್ತ ಸೆಳೆಯುವಂತೆ ಮಾಡುತ್ತಿವೆ. ಸರಿ ತಪ್ಪುಗಳ ನಡುವಿನ ವ್ಯತ್ಯಾಸದ ವಿವೇಚನೆ ಹೇಳದ ಶಿಕ್ಷಣ ಅದೆಷ್ಟು ಅಂಕಗಳನ್ನು ಗಳಿಸಿದರೂ ಖುಷಿಯಿಂದಿರುವುದನ್ನು ಕಲಿಸುವುದಿಲ್ಲ. ಪರಿಣತರಾಗುವ ಭರದಲ್ಲಿ ಕಾಮನಬಿಲ್ಲಿನ ಬಣ್ಣಗಳನ್ನು ಆನಂದಿಸುವುದು ಕಲಿಸುವುದಿಲ್ಲ. ಪ್ರಕೃತಿಯೊಂದಿಗಿನ ಒಡನಾಟವಿಲ್ಲದೆ ಮಕ್ಕಳು ಸ್ವಕೇಂದ್ರಿತ ವ್ಯಕ್ತಿತ್ವದವರಾಗುತ್ತಿದ್ದಾರೆ.

ಸರಿ ಮತ್ತು ತಪ್ಪುಗಳ ನಡುವಿನ ಗೆರೆ ಅತಿ ತೆಳುವಾದುದು. ತಪ್ಪೆನಿಸಿದ್ದನ್ನು ಹೆತ್ತವರ ಬಳಿ ಹಂಚಿಕೊಂಡರೆ ಅದು ಸರಿಯಾಗಿ ಬದಲಾಗುತ್ತದೆ. ಸರಿಪಡಿಸುವುದೂ ಸುಲಭದ ಕೆಲಸ. ಆದರೆ ತಮ್ಮೊಳಗೆ ಅಪರಾಧಿ ಭಾವ ಬೆಳೆಸಿಕೊಳ್ಳುವ ಮಕ್ಕಳಿಗೆ ಎಲ್ಲ ಸರಿಪಡಿಸಬಹುದು ಎಂಬ ಸಣ್ಣದೊಂದು ಹುಲುಕಡ್ಡಿಯ ಆಸರೆಯೂ ಸಿಗದಂತಾಗಿದೆ. ತಮ್ಮಷ್ಟಕ್ಕೆ ತಾವೇ ದ್ವೀಪವಾಗುವ ಮಕ್ಕಳನ್ನು ಮತ್ತೆ ಲೋಕಾಂತಕ್ಕೆ ತರಲು ಪಾಲಕರೂ ಮತ್ತು ಶಿಕ್ಷಕರು ಮನಬಿಚ್ಚಿ ಮಾತಾಡುವ ಪರಿಸರ ಕಲ್ಪಿಸಿಕೊಡಬೇಕು.

ಸಂದರ್ಭ, ಸನ್ನಿವೇಶಗಳನ್ನು ನಿಭಾಯಿಸುವ ಕಲೆ ಕಲಿಸದಿದ್ದರೆ ಆ ಶಿಕ್ಷಣ ಪದ್ಧತಿಯಲ್ಲಿ ದೋಷವಿದೆ ಎಂದೇ ಅರ್ಥ. ಸಮಸ್ಯೆಯ ನಿವಾರಣೆಯ ಬದಲು ಪರಿಹಾರ ಹುಡುಕುವ ನಮ್ಮ ದೃಷ್ಟಿಕೋನವೂ ಬದಲಾಗಬೇಕಾಗಿದೆ. ಮಕ್ಕಳು ತಮ್ಮ ಬಾಲ್ಯವನ್ನು ಅಂಕ ಗಳಿಸುವ ಒತ್ತಡ, ಒಬ್ಬಂಟಿಯಾಗಿ ಸ್ಪರ್ಧಾತ್ಮಕ ಜಗತ್ತಿನ ಸೋಲು ಗೆಲುವುಗಳ ಹಾವು ಏಣಿಯಾಟ ಆಡುವ ಬದಲು ಸ್ವಚ್ಛಂದ ಪರಿಸರದಲ್ಲಿ ಜ್ಞಾನಾರ್ಜನೆಯೇ ಮುಖ್ಯ ಉದ್ದೇಶ ಎಂಬಂತೆ ಬೆಳೆಯುವಂತಾಗಬೇಕು.

ಸ್ಪರ್ಧಾತ್ಮಕ ಜಗತ್ತಿಗೆ ತಯಾರು ಮಾಡುವ, ತರಬೇತುಗೊಳಿಸುವ ರಿಂಗ್ ಮಾಸ್ಟರ್‌ಗಳಂತೆ ಪಾಲಕರು, ಶಿಕ್ಷಕರು ವರ್ತಿಸುತ್ತಿದ್ದಲ್ಲಿ ಮಕ್ಕಳು ಮಗುವಾಗಿ ಬೆಳೆಯುವ ಬದಲು, ತರಬೇತಿ ಪಡೆದ ಮನುಷ್ಯಪ್ರಾಣಿಯಂತಾಗುತ್ತದೆ.

ಶಾಲೆಗಳಲ್ಲಿ ಆಪ್ತಸಮಾಲೋಚಕರ ನೇಮಕಾತಿ ಯೋಜನೆ ಸ್ವಾಗತಾರ್ಹವಾಗಿದೆ. ಆದರೆ ಇದು ಪಾಲಕರ ಹೊಣೆಗಾರಿಕೆಯನ್ನು ಜಾರಿಸುವಂತಿಲ್ಲ. ಶಿಕ್ಷಕರು– ಪಾಲಕರು ಹಾಗೂ ಮಕ್ಕಳ ನಡುವಿನ ಬಾಂಧವ್ಯದ ಕೊಂಡಿ ಶಿಥಿಲವಾಗುತ್ತಿರುವ ಈ ದಿನಗಳಲ್ಲಿ ಆಪ್ತಸಮಾಲೋಚಕರು ಇದಕ್ಕೆ ಬೆಸುಗೆ ಹಾಕಲಾಗುವುದಿಲ್ಲ. ಕಲಿಸುವುದು ಹೊರತುಪಡಿಸಿ ಬೋಧಕೇತರ ಕೆಲಸಗಳನ್ನು ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಕರ ಹೆಗಲಿಗೆ ನೀಡಬಾರದು.

ಪಾಲಕರು ಮತ್ತು ಶಿಕ್ಷಕರ ಮೇಲಿನ ಈ ಗುರುತರ ಜವಾಬ್ದಾರಿಯನ್ನು ಅರಿಯಲು ಇದು ಸಕಾಲವಾಗಿದೆ. ಇಲ್ಲದಿದ್ದಲ್ಲಿ ಮಾನವ ಪ್ರಭೇದಗಳಲ್ಲಿ ತನ್ನನ್ನೇ ತಾನು ಕೊನೆಗೊಳಿಸುವ ಸಮುದಾಯವೊಂದನ್ನು ನಮ್ಮ ಅರಿವಿಲ್ಲದೆಯೇ ಬೆಳೆಸಿದಂತಾಗುತ್ತದೆ.

ಸ್ವಚ್ಛಂದ ಬಾಲ್ಯ, ಹಾಡುತ, ಆಡುತ, ಮಾತಾಡುತ ನಲಿಯುತ ಕಲಿಯುವ ದಿನಗಳಿಗೆ ಶಿಕ್ಷಕರೂ ಅಷ್ಟೇ ಒತ್ತಡರಹಿತರಾಗಿರುವುದು ಮುಖ್ಯವಾಗಿದೆ. ಸಮಯ ನೀಡಿ, ಮಕ್ಕಳೊಂದಿಗೆ ಮಾತಾಡಿ ಪರಿಪೂರ್ಣ ಪಾಲಕರಾಗದೆ, ಪರಿಣತ ಮಕ್ಕಳನ್ನು ನಿರೀಕ್ಷಿಸುವುದೂ ತಪ್ಪಾಗುತ್ತದೆ. ಪಾಲಕರು ಮಕ್ಕಳೊಂದಿಗೆ ಸಮಯ ಕಳೆಯಬೇಕು. ಮಕ್ಕಳ ಮಾತುಗಳಿಗೆ ಕಿವಿಯಾಗಬೇಕು. ನಡವಳಿಕೆಯನ್ನು ನೋಡುವ ಕಣ್ಣಾಗಬೇಕು. ಸೂಕ್ಷ್ಮ ಮನಸಿನ ಮಕ್ಕಳಿಗೆ ಹದಿಹರೆಯದಲ್ಲಿ ಮೈಮನಸುಗಳ ನಡುವಿನ ಕಂದರ ಮುಚ್ಚಲು ಹೆತ್ತವರೇ ಆಪ್ತಸಮಾಲೋಚಕರಾಗಬೇಕು.

■ ರಶ್ಮಿ ಎಸ್